# ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಕೃಷಿ ಮಹಿಳೆ

**ಪ್ರವೀಣ ಯಲ್ಲಪ್ಪ ಹನಸಿ***

**DOI: https://doi.org/10.5281/zenodo.19637992**

**ABSTRACT**

ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಮಹಿಳೆಯರ ಹಕ್ಕುಗಳ ಕುರಿತು ಅನೇಕ ಚಳುವಳಿ ಮತ್ತು ಹೋರಾಟಗಳನ್ನು ರೂಪಿಸಿದವರು. ಅವರ ದೃಷ್ಟಿಯಲ್ಲಿ ಮಹಿಳೆಯರು ಕೂಡ ಈ ದೇಶದ ಪ್ರಮುಖ ಆರ್ಥಿಕ ಶಕ್ತಿಯಾಗಿದ್ದಾರೆ; ಕೃಷಿಯು ಆರಂಭದಿಂದಲೇ ಮಹಿಳೆಯರ ಪ್ರಮುಖ ಕಾರ್ಯಕ್ಷೇತ್ರವಾಗಿ ಕಾಣಿಸುತ್ತದೆ. ಕೃಷಿ ಉತ್ಪಾದನೆಯಲ್ಲಿ ಮಹಿಳೆಯರ ಪಾಲು ಗಣನೀಯವಾಗಿದ್ದರೂ, ಭೂ ಒಡೆತನ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವರು ಇಂದಿಗೂ ಹಿಂದುಳಿದಿದ್ದಾರೆ. ಜಾತಿ, ಲಿಂಗ ಮತ್ತು ವರ್ಗಗಳ ನೆಲೆಯಲ್ಲಿ ಕೃಷಿ ಮಹಿಳೆಯರು ಎದುರಿಸುತ್ತಿರುವ ಶೋಷಣೆಯನ್ನು ಅಂಬೇಡ್ಕರ್ ಅವರ ಚಿಂತನೆಗಳು, ವಿಶೇಷವಾಗಿ 'ಹಿಂದೂ ಕೋಡ್ ಬಿಲ್' ಮತ್ತು 'ರಾಜ್ಯ ಸಮಾಜವಾದ'ದ ಪರಿಕಲ್ಪನೆಗಳ ಮೂಲಕ ಈ ಲೇಖನವು ವಿಶ್ಲೇಷಿಸುತ್ತದೆ.

**KEYWORDS:** ಕೃಷಿ ಮಹಿಳೆ, ಡಾ. ಬಿ.ಆರ್. ಅಂಬೇಡ್ಕರ್, ಲಿಂಗ ಸಮಾನತೆ, ಹಿಂದೂ ಕೋಡ್ ಬಿಲ್, ಆಸ್ತಿ ಹಕ್ಕು, ಕೃಷಿಯ ಸ್ತ್ರೀಕರಣ, ದಲಿತ ಕೃಷಿ ಕಾರ್ಮಿಕರು.

* **ಪ್ರವೀಣ ಯಲ್ಲಪ್ಪ ಹನಸಿ,** ಎಂ.ಎ. 4ನೇ ಸೆಮಿಸ್ಟರ್ ವಿದ್ಯಾರ್ಥಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪೀಠಿಕೆ:**

ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ಬೀಜ ಬಿತ್ತುವುದರಿಂದ ಹಿಡಿದು ಕಳೆ ಕೀಳುವುದು, ರಸಗೊಬ್ಬರ ಹಾಕುವುದು ಮತ್ತು ಕೊಯ್ಲಿನವರೆಗೆ ಎಲ್ಲಾ ಬಹುಪಾಲು ಕೆಲಸಗಳಲ್ಲೂ ಮಹಿಳೆಯರು ಪಾಲ್ಗೊಳ್ಳುತ್ತಿದ್ದಾರೆ. ಆದರೆ ಸಮಾಜದ ದೃಷ್ಟಿಯಲ್ಲಿ ಕೃಷಿ ಎಂದರೆ ಕೇವಲ 'ಉಳುವವನು' ಅಂದರೆ ಪುರುಷ ಎಂಬ ಕಲ್ಪನೆ ಮಾತ್ರ ಬೇರೂರಿದೆ. ಈ ದೇಶದ ಬೆನ್ನೆಲುಬು ರೈತನೆಂದು ಹೇಳುತ್ತೇವೆ, ಆದರೆ ಅದರ ಹಿಂದೆ ಇರುವ ಎಷ್ಟೋ ಮಹಿಳೆಯರ ಶ್ರಮವನ್ನು ನಾವು ಪರಿಗಣಿಸುವುದೇ ಇಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಭೂಮಿಯ ಒಡೆಯ ಪುರುಷನಾಗಿರುವುದರಿಂದ ಅದರ ಸಂಪೂರ್ಣ ಶ್ರೇಯಸ್ಸು ಆತನಿಗೇ ಸಲ್ಲುತ್ತದೆ. ಕೃಷಿ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಅವರು 'ಸಮಾನ ಕೆಲಸಕ್ಕೆ ಸಮಾನ ವೇತನ'ದಂತಹ ಕಾಯ್ದೆಗಳ ಬಗ್ಗೆ ಧ್ವನಿ ಎತ್ತಿದ್ದರು.

**ಸಾಹಿತ್ಯ ವಿಮರ್ಶೆ:**

ಭಾರತೀಯ ಮಹಿಳೆಯರ ಕುರಿತು ವಿಚಾರಿಸಿದಾಗ, ಕೃಷಿಯಲ್ಲಿ ಅತಿ ಹೆಚ್ಚು ಭಾಗವಹಿಸುವ ಆಸಕ್ತಿಯನ್ನು ಹೊಂದಿರುವ ಮಹಿಳೆಯರು ಭಾರತದಲ್ಲಿ ಕಾಣಸಿಗುತ್ತಾರೆ. ಕೃಷಿ ಮಹಿಳೆಯರ ಕುರಿತು ಅಂಬೇಡ್ಕರ್ ರವರು, ಮಹಿಳಾ ಕಾರ್ಮಿಕರ ಶ್ರಮಕ್ಕೆ ಗೌರವ ಮತ್ತು ಮಾನ್ಯತೆ ಅಗತ್ಯವೆಂದು ಹೇಳಿದ್ದಾರೆ. ಅದೇ ರೀತಿ ಗಾಂಧೀಜಿಯವರು ಮಹಿಳೆಯನ್ನು 'ಕೃಷಿಯ ನಿಜವಾದ ಬೆನ್ನೆಲುಬು' ಎಂದು ವ್ಯಾಖ್ಯಾನಿಸಿದ್ದಾರೆ; ಇಳಾ ಭಟ್ ರವರು ಕೃಷಿ ಮಹಿಳೆಯರ ಕುರಿತು ಅನೇಕ ಸಂದರ್ಭಗಳಲ್ಲಿ ಧ್ವನಿ ಎತ್ತಿದ್ದು, "ಮಹಿಳಾ ರೈತರಿಗೆ ಹಕ್ಕುಗಳು ದೊರೆತಾಗ ಮಾತ್ರ ಕೃಷಿ ಅಭಿವೃದ್ಧಿ ಸಾಧ್ಯ" ಎಂದು ವಾದಿಸಿದ್ದಾರೆ. ಕೃಷಿಯಲ್ಲಿ ಮಾತ್ರವಲ್ಲದೆ ಪರಿಸರ ರಕ್ಷಣೆಯಲ್ಲೂ ಮಹಿಳೆಯರ ಪಾತ್ರ ದೊಡ್ಡದು; ಅಪ್ಪಿಕೋ ಮತ್ತು ಚಿಪ್ಕೋ ಚಳುವಳಿಗಳಂತಹ ಪರಿಸರ ಚಳುವಳಿಗಳಲ್ಲಿ ಮಹಿಳೆಯರ ಪಾತ್ರ ಅಭೂತಪೂರ್ವವಾದದ್ದು (ವಂದನಾ ಶಿವ, 1988).

**ಅಧ್ಯಯನದ ಉದ್ದೇಶಗಳು:**

1. ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ದುಡಿಮೆ ಮತ್ತು ಅವರಿಗೆ ಸಿಗುತ್ತಿರುವ ವೇತನ ತಾರತಮ್ಯವನ್ನು ಅಂಬೇಡ್ಕರ್ ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದು.
2. ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಭೂ ಒಡೆತನ ಮತ್ತು ಆರ್ಥಿಕ ಭದ್ರತೆಯ ಕುರಿತು ತಿಳಿಯುವುದು.
3. ಆಧುನಿಕ ಕಾಲಘಟ್ಟದಲ್ಲಿ 'ಕೃಷಿಯ ಸ್ತ್ರೀಕರಣ' (Feminization of Agriculture) ಹಾಗೂ ಮಹಿಳಾ ಕಾರ್ಮಿಕರ ಸವಾಲುಗಳನ್ನು ಗುರುತಿಸುವುದು.
4. ಸಂವಿಧಾನಾತ್ಮಕ ಹಕ್ಕುಗಳು ಮತ್ತು ಹಿಂದೂ ಕೋಡ್ ಬಿಲ್ ಕೃಷಿ ಮಹಿಳೆಯರ ಬದುಕಿನಲ್ಲಿ ತಂದ ಬದಲಾವಣೆಗಳನ್ನು ಅರಿಯುವುದು.

**ಕೃಷಿಯಲ್ಲಿ ಲಿಂಗ ಅಸಮಾನತೆ ಮತ್ತು ಶ್ರಮದ ವಿಭಜನೆ:**

ಸಮಾಜದಲ್ಲಿ ಇಂದಿಗೂ ಲಿಂಗ ಅಸಮಾನತೆಯನ್ನು ನಾವು ಕಾಣಬಹುದು; ಅಂಬೇಡ್ಕರ್ ಅವರು ಇದರ ವಿರುದ್ಧ ಹೋರಾಡಿ ಸಮಾಜದಲ್ಲಿ ಸಮಾನತೆಯನ್ನು ನಿರ್ಮಿಸಲು ಕರೆಕೊಟ್ಟಿದ್ದರು. ಕೃಷಿ ವಲಯದಲ್ಲಿ ಶ್ರಮದ ವಿಭಜನೆಯು ತಾರತಮ್ಯದಿಂದ ಕೂಡಿದೆ; ಕಠಿಣವಲ್ಲದ ಆದರೆ ಹೆಚ್ಚಿನ ತಾಳ್ಮೆ ಮತ್ತು ಸಮಯ ಬೇಡುವ (ನಾಟಿ ಮಾಡುವುದು,

ಕಳೆ ಕೀಳುವುದು) ಕೆಲಸಗಳನ್ನು ಮಹಿಳೆಯರಿಗೆ ವಹಿಸಲಾಗುತ್ತದೆ. ಆದರೆ, ಮಾರುಕಟ್ಟೆ ವ್ಯವಹಾರ, ಟ್ರ್ಯಾಕ್ಟರ್ ಚಾಲನೆ, ಸಾಲ ಪಡೆಯುವಿಕೆಯಂತಹ ಆರ್ಥಿಕ ಅಧಿಕಾರವಿರುವ ಕೆಲಸಗಳನ್ನು ಪುರುಷರು ನಿಯಂತ್ರಿಸುತ್ತಾರೆ. ಪುರುಷನಿಗೆ ಸಮಾನವಾಗಿ ಮಹಿಳೆ ಕಾರ್ಯನಿರ್ವಹಿಸಲಾರಳು ಎಂಬ ಮನುವಾದಿ ಚಿಂತನೆಯನ್ನು ವಿರೋಧಿಸಿದ ಅಂಬೇಡ್ಕರ್, ಮಹಿಳೆಗೂ ಸಮಾನ ಅವಕಾಶಗಳನ್ನು ಒದಗಿಸಬೇಕೆಂದು ಆಗ್ರಹಿಸಿದ್ದರು.

**ಕೃಷಿ ಸುಧಾರಣೆ ಮತ್ತು ದಲಿತ ಮಹಿಳೆಯರ ಶ್ರಮ:**

ಬಾಬಾಸಾಹೇಬರು ಭಾರತೀಯ ಕೃಷಿ ಸಮಸ್ಯೆಯನ್ನು ಕೇವಲ ಆರ್ಥಿಕ ನೆಲೆಯಲ್ಲಿ ನೋಡದೆ, ಸಾಮಾಜಿಕ ನೆಲೆಯಲ್ಲಿ (ಜಾತಿ ವ್ಯವಸ್ಥೆ) ನೋಡಿದರು. ಭೂಹೀನ ಕೃಷಿ ಕಾರ್ಮಿಕರಲ್ಲಿ ಅತಿ ಹೆಚ್ಚು ಜನರು ದಲಿತರು ಮತ್ತು ಅದರಲ್ಲಿಯೂ ದಲಿತ ಮಹಿಳೆಯರು ಎಂಬುದು ಗಮನಾರ್ಹ. ಅಂಬೇಡ್ಕರ್ ಅವರು 'ಸ್ಟೇಟ್ಸ್ ಅಂಡ್ ಮೈನಾರಿಟೀಸ್' (States and Minorities) ಕೃತಿಯಲ್ಲಿ 'ರಾಜ್ಯ ಸಮಾಜವಾದ'ವನ್ನು (State Socialism) ಪ್ರತಿಪಾದಿಸಿದರು. ಕೃಷಿ ಭೂಮಿಯನ್ನು ರಾಷ್ಟ್ರೀಕರಣಗೊಳಿಸಿ, ಸಾಮೂಹಿಕ ಕೃಷಿ (Co-operative Farming) ಪದ್ಧತಿಯನ್ನು ಜಾರಿಗೆ ತಂದರೆ, ಭೂಹೀನ ಮಹಿಳಾ ಕೃಷಿ ಕಾರ್ಮಿಕರಿಗೆ ನೇರವಾಗಿ ಆರ್ಥಿಕ ಭದ್ರತೆ ಸಿಗುತ್ತದೆ ಎಂದು ಅವರು ನಂಬಿದ್ದರು.

**ಮಹಿಳೆಯರಿಗೆ ಆಸ್ತಿ ಹಕ್ಕು ಮತ್ತು ಹಿಂದೂ ಕೋಡ್ ಬಿಲ್:**

ಭಾರತದಲ್ಲಿ ಶೇಕಡ 49–50ರಷ್ಟು ಮಹಿಳೆಯರು ಇದ್ದರೂ, ಆರ್ಥಿಕ ಸಂಪನ್ಮೂಲಗಳ ಒಡೆತನದಲ್ಲಿ ಅವರ ಪಾಲು ತೀರಾ ನಗಣ್ಯ. ಮಹಿಳೆಯರಿಗೂ ಸಮಾನ ಆಸ್ತಿ ಹಕ್ಕು ಸಿಗಬೇಕೆಂದು ಅಂಬೇಡ್ಕರ್ ಅವರು 'ಹಿಂದೂ ಕೋಡ್ ಬಿಲ್' (Hindu Code Bill – 1950) ಅನ್ನು ಜಾರಿಗೆ ತರಲು ತಮ್ಮ ಸ್ಥಾನವನ್ನೇ ಪಣಕ್ಕಿಟ್ಟರು.

- ಮಹಿಳೆಗೆ ಆಸ್ತಿಯಲ್ಲಿ ಸಮಾನ ಪಾಲು (ಉತ್ತರಾಧಿಕಾರತ್ವದ ಹಕ್ಕು).
- ಜೀವನಾಂಶ ಮತ್ತು ದತ್ತು ಸ್ವೀಕಾರದ ಹಕ್ಕು.

ಭಾರತದಲ್ಲಿ ಪ್ರಸ್ತುತ ಕೃಷಿ ಭೂಮಿಯ ಒಡೆತನದಲ್ಲಿ ಮಹಿಳೆಯರ ಪಾಲು ಕೇವಲ 13–14% ಮಾತ್ರ ಇದೆ. ಹಿಂದೂ ಕೋಡ್ ಬಿಲ್‌ನಂತಹ ಕ್ರಾಂತಿಕಾರಿ ಹೆಜ್ಜೆಯಿಂದಾಗಿ ಇಂದು ಮಹಿಳೆಯರು ಕಾನೂನು ಹೋರಾಟದ ಮುಖಾಂತರ ತಮ್ಮ ಆಸ್ತಿಯನ್ನು ಪಡೆದುಕೊಂಡು ಸ್ವಾವಲಂಬಿ ಬದುಕು ಸಾಗಿಸಲು ಸಾಧ್ಯವಾಗಿದೆ.

**ಪ್ರಸ್ತುತ ಸನ್ನಿವೇಶ:**

ಕೃಷಿಯ ಸ್ತ್ರೀಕರಣ (Feminization of Agriculture): ಜಾಗತೀಕರಣದ ನಂತರ, ಹಳ್ಳಿಗಳಿಂದ ಪುರುಷರು ಉದ್ಯೋಗವನ್ನರಸಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ; ಇದರಿಂದಾಗಿ ಕೃಷಿಯ ಸಂಪೂರ್ಣ ಹೊಣೆಗಾರಿಕೆ ಮಹಿಳೆಯರ ಹೆಗಲೇರಿದೆ, ಇದನ್ನು ಸಮಾಜಶಾಸ್ತ್ರೀಯ ಭಾಷೆಯಲ್ಲಿ 'ಕೃಷಿಯ ಸ್ತ್ರೀಕರಣ' ಎನ್ನುತ್ತಾರೆ. ಜವಾಬ್ದಾರಿ ಹೆಚ್ಚಾಗಿದ್ದರೂ, ಭೂಮಿಯ ಹಕ್ಕುಪತ್ರ (Land Title) ಪತಿಯ ಅಥವಾ ಮಾವನ ಹೆಸರಿನಲ್ಲಿ ಇರುವುದರಿಂದ, ಈ ಮಹಿಳೆಯರಿಗೆ ಬ್ಯಾಂಕುಗಳಿಂದ ಕೃಷಿ ಸಾಲ, ಸಬ್ಸಿಡಿ ಅಥವಾ ಸರ್ಕಾರದ ಪರಿಹಾರಗಳು ಸಿಗುತ್ತಿಲ್ಲ. ಕೃಷಿ ಎಂಬುದು ಉದ್ಯಮವಾಗಿ ಪರಿವರ್ತನೆಯಾಗುತ್ತಿರುವ ಈ ಹೊತ್ತಿನಲ್ಲಿ, ಮಾನವ ಸಂಪನ್ಮೂಲವಾಗಿರುವ ಮಹಿಳೆಯ ಘನತೆಯನ್ನು ರಕ್ಷಿಸುವ ಅಂಬೇಡ್ಕರ್ ಚಿಂತನೆಗಳು ಇಲ್ಲಿ ಅತಿ ಪ್ರಸ್ತುತವಾಗುತ್ತವೆ.

**ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಂಬೇಡ್ಕರ್ ದೃಷ್ಟಿಕೋನ:**

**ಘನತೆ ಮತ್ತು ಸ್ವಾಭಿಮಾನ:** ಮಹಿಳೆಯರು ತಮ್ಮ ಘನತೆ ಮತ್ತು ಗೌರವಗಳನ್ನು ರಕ್ಷಿಸಿಕೊಳ್ಳಲು ಹಾಗೂ ದಬ್ಬಾಳಿಕೆಗಳನ್ನು ವಿರೋಧಿಸಲು ಕಲಿಯಬೇಕೆಂದು ಅಂಬೇಡ್ಕರ್ ಒತ್ತಿ ಹೇಳಿದ್ದಾರೆ. ಹಳ್ಳಿಗಳಲ್ಲಿ ಶ್ರಮಜೀವಿಗಳಾದ ಕೃಷಿ ಮಹಿಳೆಯರಿಗೆ ಶ್ರಮಕ್ಕೆ ತಕ್ಕ ಗೌರವ ದೊರೆಯದಿರುವುದನ್ನು ಪ್ರಶ್ನಿಸುವ ಪ್ರಜ್ಞೆ ಬೆಳೆಯಬೇಕಿದೆ.

**ಮಹಾಡ್ ಸತ್ಯಾಗ್ರಹ ಮತ್ತು ಸಂಪ್ರದಾಯಗಳ ಧಿಕ್ಕಾರ:** ಮಹಿಳೆಯರು ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು, ಪಿತೃ ಪ್ರಧಾನ (Patriarchal) ಕುಟುಂಬ ರಚನೆಗಳನ್ನು ವಿರೋಧಿಸಲು ಮತ್ತು ದಮನಕಾರಿ ಸಂಪ್ರದಾಯಗಳನ್ನು ಪ್ರಶ್ನಿಸಲು ಅವರು ಪ್ರೋತ್ಸಾಹಿಸಿದರು.

**ಸಲಹೆಗಳು:**

ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರದ ಮೌಲ್ಯವನ್ನು ಅರಿಯದೆ ಸರ್ಕಾರಗಳು ನಿರ್ಣಯಗಳನ್ನು ತೆಗೆದುಕೊಳ್ಳುವುದು ಪ್ರಮುಖ ಹಿನ್ನಡೆಯಾಗಿದೆ. ಸಂವಿಧಾನದ ಆಶಯಗಳಾದ ಸಮಾನತೆ ಮತ್ತು ನ್ಯಾಯವನ್ನು ಕೃಷಿ ವಲಯದಲ್ಲಿ ಜಾರಿಗೆ ತರಲು ಈ ಕೆಳಗಿನ ಕ್ರಮಗಳು ಅವಶ್ಯಕ:

**ಭೂ ಒಡೆತನದ ಹಸ್ತಾಂತರ:** ಕೃಷಿ ಭೂಮಿಯನ್ನು ಕಡ್ಡಾಯವಾಗಿ ಪತಿ ಮತ್ತು ಪತ್ನಿಯರ ಜಂಟಿ ಹೆಸರಿನಲ್ಲಿ (Joint Registration) ನೋಂದಾಯಿಸುವ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಬೇಕು.

**ಸಮಾನ ವೇತನ ಯೋಜನೆ:** ಕೃಷಿ ವೇತನದಲ್ಲಿ ಲಿಂಗತಾರತಮ್ಯ ವಿಪರೀತವಾಗಿದೆ; ಪುರುಷರಿಗೆ ದಿನದ ಕೂಲಿ ₹400–500 ಇದ್ದರೆ, ಅದೇ ಕಾರ್ಯ ನಿರ್ವಹಿಸುವ ಮಹಿಳೆಗೆ ಕೇವಲ ₹200–250 ನೀಡಲಾಗುತ್ತದೆ. ಕಟ್ಟುನಿಟ್ಟಾದ 'ಸಮಾನ ವೇತನ ಕಾಯ್ದೆ' ಕೃಷಿ ಕಾರ್ಮಿಕರಿಗೂ ಅನ್ವಯವಾಗಬೇಕು.

**ಸ್ವತಂತ್ರ ರೈತ ಮಹಿಳೆ ಮಾನ್ಯತೆ:** ಕೇವಲ 'ಕೃಷಿ ಕಾರ್ಮಿಕರು' ಎಂದು ಕರೆಯದೆ, ಭೂಮಿ ಇಲ್ಲದಿದ್ದರೂ ಕೃಷಿ ಮಾಡುವ ಮಹಿಳೆಯರಿಗೆ 'ರೈತರು' (Farmers) ಎಂಬ ಶಾಸನಬದ್ಧ ಮಾನ್ಯತೆ ನೀಡಬೇಕು. ಇದರಿಂದ ಅವರಿಗೆ ಸರ್ಕಾರದ ಯೋಜನೆಗಳು ನೇರವಾಗಿ ತಲುಪುತ್ತವೆ.

**ಮಕ್ಕಳಿಗೆ ಶೈಕ್ಷಣಿಕ ಸಹಾಯಧನ:** ಕೃಷಿ ಕಾರ್ಮಿಕ ಮಹಿಳೆಯರ ಮಕ್ಕಳಿಗೆ ವಿಶೇಷ ಶೈಕ್ಷಣಿಕ ಸಹಾಯಧನ ನೀಡುವುದರ ಮೂಲಕ ಅವರ ಮುಂದಿನ ಪೀಳಿಗೆಯನ್ನು ಆರ್ಥಿಕವಾಗಿ ಮೇಲೆತ್ತಬಹುದು.

**ಉಪಸಂಹಾರ:**

ಅಂಬೇಡ್ಕರ್ ಅವರು ರೂಪಿಸಿದ ಸ್ತ್ರೀವಾದಿ ಚಿಂತನೆಗಳು ಇಂದಿನ ಸಮಾಜದಲ್ಲಿ ಮಹಿಳೆಯರಿಗೆ ಗೌರವ ಮತ್ತು ಘನತೆಯನ್ನು ಒದಗಿಸಿವೆ. ಇವತ್ತು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರೆ, ಅದಕ್ಕೆ ಪ್ರಮುಖವಾಗಿ ಸಂವಿಧಾನದ ಮೂಲಕ ದೊರೆತ ಕಾನೂನುಗಳೇ (ಅನುಚ್ಛೇದ 14, 15, 39(d)) ಕಾರಣ. ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರ ಕುರಿತು ಬಾಬಾ ಸಾಹೇಬರು 'ಹಿಂದೂ ಕೋಡ್ ಬಿಲ್' ಹಾಗೂ 'ಭೂ ಸುಧಾರಣಾ ನೀತಿ'ಗಳ ಮೂಲಕ ತೋರಿದ ಕಾಳಜಿಯು

ಅಗಾಧವಾದದ್ದು. ಮಹಿಳೆಯರಿಗೆ ಕೇವಲ ಆರ್ಥಿಕ ಸ್ವಾತಂತ್ರ್ಯವಷ್ಟೇ ಅಲ್ಲ, ಭೂಮಿಯ ಒಡೆತನದ ಹಕ್ಕು ಸಿಕ್ಕಾಗ ಮಾತ್ರ ನಿಜವಾದ ಗ್ರಾಮೀಣಾಭಿವೃದ್ಧಿ ಮತ್ತು ಸಮಾನತೆ ಸಾಧಿಸಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**


1. Ambedkar, B. R. (1987). Dr. Babasaheb Ambedkar Writings and Speeches (Vol. 3 & Vol. 14 – The Hindu Code Bill).
2. Education Department, Government of Maharashtra.
3. ಅಂಬೇಡ್ಕರ್, ಬಿ.ಆರ್. ಸ್ಟೇಟ್ಸ್ ಅಂಡ್ ಮೈನಾರಿಟೀಸ್ (States and Minorities), ಅನುವಾದಿತ ಆವೃತ್ತಿಗಳು.
4. Bhatt, Ela R. (2006). We Are Poor but So Many: The Story of Self–Employed Women in India. Oxford University Press.
5. Shiva, Vandana. (1988). Staying Alive: Women, Ecology and Survival in India. Kali for Women, New Delhi.
6. Kelkar, Govind. (2011). The Feminization of Agriculture in Asia: Implications for Women's Agency and Productivity. UN Women Report.
7. Rege, Sharmila. (2013). Against the Madness of Manu: B.R. Ambedkar's Writings on Brahmanical Patriarchy. Navayana Publishing.
8. ಭಾರತ ಸರ್ಕಾರದ ವರದಿಗಳು: ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ವಾರ್ಷಿಕ ವರದಿಗಳು (ಕೃಷಿಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಅಂಕಿ–ಅಂಶಗಳು).